**೧೦. ಎಲ್ಲಾ ಯೋಜನೆಗಳ ವಿವರವನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿ ಹಂಚಿಕೆ ಮಾಡಲಾದ ಆಯ–ವ್ಯಯ (ಕಲಂ ೪ (೧) (ಬಿ) (XI)**

೨೦೨೩–೨೪ನೇ ಸಾಲಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಅದರನ್ವಯ ಸರಕಾರದ ಆದೇಶದಲ್ಲಿ ಲೆಕ್ಕ ಶೀರ್ಷಿಕೆ: ೨೨೦೫–೦೦ ೧೦೨–೪–೨೨–೧೦೩ ರಡಿಯಲ್ಲಿ ರೂ. ೫೦೦.೦೦ ಲಕ್ಷಗಳಿಗೆ ಸರಕಾರದಿಂದ ಅನುಮೋದನೆ ನೀಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸದರಿ ಮೊತ್ತವನ್ನು ಎರಡು ಕಂತುಗಳಲ್ಲಿ ಲೆಕ್ಕ ಶೀರ್ಷಿಕೆ ೨೨೦೫–೦೦ ೧೦೨–೪–೨೨–೧೦೩ ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಈ ವೆಚ್ಚವನ್ನು ೨೦೨೩–೨೪ನೇ ಸಾಲಿನ ಲೆಕ್ಕ ಶೀರ್ಷಿಕೆ: ೨೨೦೫–೦೦ ೧೦೨–೪–೨೨–೧೦೩ರ ಅಡಿಯಲ್ಲಿ ಭರಿಸತಕ್ಕದೆಂದು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ಆದೇಶಿಸಿರುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಿಡುಗಡೆಯಾಗಿರುವ ಅನುದಾನವನ್ನು ೨೦೨೩–೨೪ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗುತ್ತದೆ. (ಯೋಜನೇತರ ವೆಚ್ಚ ಮತ್ತು ಯೋಜನೆಗಳಡಿ ವೆಚ್ಚ)

**ಶೀರ್ಷಿಕೆ–ಯೋಜನೆಗಳಡಿ ವೆಚ್ಚ:**

೧) ಜಿಲ್ಲಾ ಸಾಹಿತ್ಯ ಸಮ್ಮೇಳನಗಳಿಗೆ ಮತ್ತು ೬ ಗಡಿನಾಡು ಘಟಕಗಳ ಸಮ್ಮೇಳನ

೨) ಜಿಲ್ಲೆಗಳ ಕಛೇರಿ ನಿರ್ವಹಣೆಗಾಗಿ ಒಬ್ಬ ಗುಮಾಸ್ತನ ವೇತನ ಅಧ್ಯಕ್ಷರ ಗೌರವ ಧನ ಸೇರಿದಂತೆ ಸ್ವಂತ ಕಟ್ಟಡವಿರುವ ಜಿಲ್ಲೆಗೆ/ಬಾಡಿಗೆ ಕಟ್ಟಡ ಇರುವ ಜಿಲ್ಲೆಗೆ ಗಡಿನಾಡು ಘಟಕಗಳ ನಿರ್ವಹಣೆಯ ವೆಚ್ಚ

೩) ತಾಲ್ಲೂಕು ಸಾಹಿತ್ಯ ಸಮ್ಮೇಳನಗಳಿಗೆ ಮತ್ತು ಹೋಬಳಿ ಸಮ್ಮೇಳನ (ಜಿಲ್ಲೆಗೆ ೫ರಂತೆ)

೪) ತಾಲ್ಲೂಕು ವಾರ್ಷಿಕ ನಿರ್ವಹಣೆಯ ವೆಚ್ಚ

೫) ಆಡಳಿತಾತ್ಮಕ ವೆಚ್ಚ, ಸಭೆ ಸಮಾರಂಭ, ಲೇಖನ ಸಾಮಗ್ರಿ, ಕಾನೂನು ಸಲಹೆಗಾರರು, ಕೋರ್ಟ್ ಖರ್ಚು, ಅಧ್ಯಕ್ಷರ ಆಪ್ತ ಸಿಬ್ಬಂದಿ ವೇತನ

೬) ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ, (೩೧ ಜಿಲ್ಲೆಗಳು+ಬೃಹತ್ ಮುಂಬಯಿ ಸೇರಿದಂತೆ ಹಾಗೂ ೬ ಗಡಿನಾಡು ಘಟಕಗಳಿಗೆ) (ಪ್ರತಿ ತಾಲ್ಲೂಕಿಗೆ+ಬೆಂಗಳೂರಿನಲ್ಲಿರುವ ೨೮ ವಿಧಾನಸಭಾ ಕ್ಷೇತ್ರಗಳಿಗೆ)

೭) ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಪ್ರತಿ ಜಿಲ್ಲೆಗೆ + ಬೃಹತ್ ಮುಂಬಯಿ ಸೇರಿದಂತೆ ಹಾಗೂ ೬ ಗಡಿನಾಡು ಘಟಕಗಳಿಗೆ (ಪ್ರತಿ ತಾಲ್ಲೂಕಿಗೆ+ಬೆಂಗಳೂರಿನಲ್ಲಿರುವ ೨೮ ವಿಧಾನಸಭಾ ಕ್ಷೇತ್ರಗಳಿಗೆ)

೮) ಶಾಸನ ಶಾಸ್ತ್ರ ೦೯ ತಿಂಗಳ ಡಿಪ್ಲೋಮಾ ಕೋರ್ಸ್ ಮಾಡಲು (ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ), ವಿಶೇಷ ಉಪನ್ಯಾಸಗಳು, ಸಂಶೋಧನಾ ಕೇಂದ್ರ, ಅಭಿಜಾತ ಸಾಹಿತ್ಯ, ಪಿ.ಎಚ್.ಡಿ. ಹಂಪಿ ವಿಶ್ವವಿದ್ಯಾಲಯ ಸಹಯೋಗದೊಂದಿಗೆ.

೯) ಅಮೂಲ್ಯ ಗ್ರಂಥಗಳು ಮತ್ತು ಪರಿಷತ್ತಿನ ಪುಸ್ತಕಗಳ ಮರು ಮುದ್ರಣ, ಹಳಗನ್ನಡ ಪಠ್ಯಗಳನ್ನು ಬಹು ಮಾಧ್ಯಮಕ್ಕೆ (ಓದು–ವ್ಯಾಖ್ಯಾನ) ಅಳವಡಿಸುವುದು.

೧೦) ಆಜೀವ ಸದಸ್ಯತ್ವ ಅಭಿಯಾನ, (ಹೋಬಳಿ, ತಾಲ್ಲೂಕು, ಜಿಲ್ಲಾ ಹಾಗೂ ಕೇಂದ್ರ ಸ್ಥಾನದಲ್ಲಿ ಪ್ರಚಾರ ಅಭಿಯಾನ ಮತ್ತು ಕಾರ್ಯಕ್ರಮಗಳ ಆಯೋಜನೆ.)

೧೧) ವಿವಿಧ ಸಾಹಿತ್ಯ ಸಮಾವೇಶಗಳು, ಕೃಷಿ, ನೀರಾವರಿ, ಮಾಧ್ಯಮ, ಚಲನಚಿತ್ರ, ಸಂಗೀತ, ನೃತ್ಯ ಹಾಗೂ ಕನ್ನಡ ಪರ ಹೋರಾಟಗಾರರ ಸಮಾವೇಶಗಳು (ಒಟ್ಟು ೧೦ ಸಮಾವೇಶಗಳು)– ವಿಚಾರ ಸಂಕಿರಣ, ಕಮ್ಮಟಗಳು ಇತ್ಯಾದಿ...

೧೨) ಕೇಂದ್ರ ಪರಿಷತ್ತಿನ ಕಟ್ಟಡಗಳ ನವೀಕರಣ–ಬಣ್ಣ ವರ್ಕ್ ಸ್ಟೇಷನ್ಸ್ ಹಾಗೂ ಅಕ್ಕಮಹಾದೇವಿ ಸಭಾಂಗಣ ನವೀಕರಣ.

೧೩) ಕನ್ನಡ ನಿಘಂಟು, ರತ್ನಕೋಶ ಮುಂತಾದ ನಿಘಂಟುಗಳನ್ನು ಪರಿಷ್ಕರಣ ಕಾರ್ಯದ ವೆಚ್ಚ.

**ಶೀರ್ಷಿಕೆ–ಯೋಜನೇತರ ವೆಚ್ಚ:**

೧) ಕೇಂದ್ರ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನದ ವೆಚ್ಚ (ಯೋಜನೇತರ ವೆಚ್ಚ)